( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ 06/02/2019

**ಅಸಲು ದಾವಾ .ನಂ. 143/2017**

( ಮುಂದುವರೆದ ಮುಖ್ಯ ವಿಚಾರಣೆಃ ಶ್ರೀಮತಿ ಎಂ.ವಿ. ವಕೀಲರಿಂದ )

ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ, ಸಹಿಗಳು ನನ್ನದೆ ಇದೆ.

ದಿನಾಂಕಃ 11-06-1992 ರಂದು ಶ್ರೀಮತಿ ಈರಮ್ಮನವರಿಂದ 1 ನೇ ವಾದಿಗೆ ಆಗಿರುವಂತಹ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ1 ಎಂದು ಗುರುತಿಸಲಾಯಿತು. ( ಪ್ರತಿವಾದಿಯ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ ) ದಿಃ*24-05-2001* ರಂದು *2* ನೇ ವಾದಿಯವರ ಹೆಸರಿಗೆ ಶ್ರೀಮತಿ ಈರಮ್ಮ ಮತ್ತು ಅವರ ಯಜಮಾನರು ದಾವಾ ಐಟಂ ನಂಃ*2* ಕ್ಕೆ ಸಂಬಂಧಿಸಿದಂತೆ ಬರೆದುಕೊಟ್ಟ ಕ್ರಯ ಪತ್ರವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ2 ಎಂದು ಗುರುತಿಸಲಾಯಿತು. ದಾವಾ ಐಟಂ ನಂಬರ್ *1* ಕ್ಕೆ ಸಂಬಂದಧಿಪಟ್ಟಂತೆ ಖಾತೆ ಬದಲಾವಣೆಯಾದ ಬಗ್ಗೆ ಖಾತೆ ಬಲಾವಣೆ ಪತ್ರವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ3 ಎಂದು ಗುರುತಿಸಲಾಯಿತು. *1* ನೇ ವಾದಿಯಿಂದ ಪ್ರತಿವಾದಿ ಐಟಂ ನಂಃ*1* ಕ್ಕೆ ಸಂಬಂಧಿಸಿದಂತೆ ದಿಃ*23-08-2007* ರಲ್ಲಿ ತನ್ನ ಹೆಸರಿಗೆ ಬರೆಸಿಕೊಂಡ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ4 ಎಂದು ಗುರುತಿಸಲಾಯಿತು. ನನ್ನಿಂದ ಪ್ರತಿವಾದಿ ಐಟಂ ನಂಃ*2* ಕ್ಕೆ ಸಂಬಂಧಿಸಿದಂತೆ ದಿಃ*23-02-2007* ರಲ್ಲಿ ತನ್ನ ಹೆಸರಿಗೆ ಬರೆಸಿಕೊಂಡ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ5 ಎಂದು ಗುರುತಿಸಲಾಯಿತು. ದಾವಾ ಐಟಂ ನಂಃ*2* ಕ್ಕೆ ಸಂಬಂಧಿಸಿದಂತೆ *2001-02* ನೇ ಸಾಲಿನ ಆಸ್ತಿ ದಾಖಲೆಯ ವಹಿಯ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಆಸ್ತಿ ತೆರಿಗೆ ರಿಜಿಸ್ಟರ್ ನ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಪ್ರತಿವಾದಿಗೆ ನಮ್ಮ ವಕೀಲರ

ಮೂಲಕ ನೀಡಿದ ನೋಟೀಸ್ ನ ಕಚೇರಿ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ೮ ಎಂದು ಗುರುತಿಸಲಾಯಿತು. ಪ್ರತಿವಾದಿ ತನ್ನ ವಕೀಲರ ಮೂಲಕ ಮರುತಿಳುವಳಿಕೆ ನೋಟೀಸ್ ನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ೯ ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದರಿಂದ ಅನುಮತಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.